ತಾಲ್ಲೂಕು ದಂಡಿನಶಿವರ ಹೋಬಳಿ ಬಿ.ಸಿ. ಕಾವಲುನಲ್ಲಿ ಕೆಲವು ಮಂಜೂರಾತಿಯಂತೆ ದುರಸ್ತಿ ಆಗಿರುತ್ತದೆ. ಸದರಿ ದುರಸ್ತಿ ಆದ ಪ್ರದೇಶದಲ್ಲಿ ಮಂಜೂರಾತಿ ಬಗ್ಗೆ ಹಕ್ಕಿನ ಬಗ್ಗೆ ಹಾಗೂ ಎಲ್ಲೆ ಬಗ್ಗೆ ಹಲವಾರು ಸಮಸ್ಯೆ ಉದ್ಭವವಾಗಿದ್ದು ಸದರೀ ಅಂಶಗಳಲ್ಲಿ ತಾಲ್ಲೂಕು ಭೂಮಾಪಕರುಗಳಿಂದ ನಿವಾರಣಗೆ ಸಾಧ್ಯವಿಲ್ಲವೆಂದು, ಈ ಕೆಲಸಕ್ಕೆ ವಿಶೇಷ ಕಾರ್ಯಪಡೆಯನ್ನು ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ತಹಸೀಲ್ದಾರ್, ಭೂದಾಖಲೆಗಳ ಸಹಾಯಕ ನಿರ್ದೇಶಕರು ಒಳಗೊಂಡಂತೆ ಸಮಿತಿ ರಚಿಸುವುದು ಅಗತ್ಯವೆಂದು ತಿಳಿಸಿ ಸರ್ಕಾರಕ್ಕೆ ದಿ: 26-2-2003 ರಂದು ಪ್ರಸ್ತಾವನೆ ಸಲ್ಲಿಸಿದ್ದಾರೆ. ಅದರಂತೆ ಸಮಿತಿ ರಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ನಂತರ ಅಳತೆ ಕಾರ್ಯದ ಬಗ್ಗೆ ಅಗತ್ಯ ಕ್ರಮ ಜರುಗಿಸಲಾಗುವುದು.

ಅ) ಬಂದಿದೆ.

ಇ) ಅಳತೆ ಕೆಲಸವನ್ನು ಅಧ್ಯತೆ ಮೇಲೆ ತೆಗೆದುಕೊಂಡು ನ್ಯೂನತೆಗಳನ್ನು ಸರಿಪಡಿಸಲಾಗುವುದು.

ಶ್ರೀರಾಮಲಿಂಗೇಶ್ವರ ದೇವಸ್ಥಾನವನ್ನು ಪ್ರವಾಸೋದ್ಯಮ ಇಲಾಖೆಗೆ ಸೇರಿಸುವುದು

73 (217) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೆಕೆರೆ ತಾಲ್ಲೂಕು ದಂಡಿನಶಿವರ ಹೋಬಳಿ "ಸಾಸಲು" ಗ್ರಾಮದ "ಶ್ರೀ ರಾಮಲಿಂಗೇಶ್ವರ ಸ್ವಾಮಿ" ದೇವಸ್ಥಾನವನ್ನು ಪ್ರವಾಸೋದ್ಯಮ ಇಲಾಖೆಗೆ ಸೇರಿಸಲು ಸರ್ಕಾರ ಯೋಚಿಸಿದೆಯೆ?

ಆ) ಈ ದೇವಸ್ಥಾನವು ಪುರಾತನ ಕಾಲದಿಂದಲೂ ಐತಿಹಾಸಿಕ ಸ್ಥಳವಾಗಿದ್ದು, ಸಾವಿರಾರು ಜನರು ಬಂದು ಹೋಗುತ್ತಿರುವುದರಿಂದ ಪ್ರವಾಸೋದ್ಯಮ ಇಲಾಖೆಗೆ ಸೇರಿಸಿ ಅಭಿವೃದ್ಧಿ ಪಡಿಸಲು ಸರ್ಕಾರ ಯೋಚಿಸಿದೆಯೇ?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಲೋಕೋಪಯೋಗಿ ಇಲಾಖೆಯ ರಸ್ತೆಗಳ ಅಭಿವೃದ್ಧಿ

74 (220) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿರುವ ರಸ್ತೆಗಳು ಎಷ್ಟು;

ಆ) ಈ ರಸ್ತೆಗಳ ರಿಪೇರಿಗಾಗಿ ಕಳೆದ ಮೂರು ವರ್ಷಗಳಿಂದ ಯಾವ ಯಾವ ಲೆಕ್ಕಶೀರ್ಷಿಕೆಯಲ್ಲಿ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ;

ಇ) ದುರಸ್ತಿಯಲ್ಲಿರುವ ಅನೇಕ ರಸ್ತೆಗಳಿಗೆ 3054ರ ಆಡಿಯಲ್ಲಿ ಈ ವರ್ಷ ಹೆಚ್ಚಿನ ಹಣ ಬಿಡುಗಡೆ ಮಾಡಲಾಗುವುದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕಿನಲ್ಲಿ ತುಮಕೂರು ಲೋಕೋಪಯೋಗಿ ಇಲಾಖೆ ವಿಭಾಗದ ವ್ಯಾಪ್ತಿಯಲ್ಲಿ ಒಂದು ರಾಜ್ಯ ಹೆದ್ದಾರಿ ಮತ್ತು ಹತ್ತು ಜಿಲ್ಲಾ ಮುಖ್ಯರಸ್ತೆಗಳು ಹಾದೂ ಹೋಗಬೇಕಾಗುತ್ತವೆ.

ಆ) ಈ ರಸ್ತೆಗಳ ರಿಪೇರಿಗಾಗಿ ಲೆಕ್ಕಶೀರ್ಷಿಕೆ 3054 ಯೋಜನೇತರ ಅಡಿಯಲ್ಲಿ 2000-01ನೇ ಸಾಲಿನಲ್ಲಿ 39.17 ಲಕ್ಷ 2001-02 ಸಾಲಿನಲ್ಲಿ 22.29 ಲಕ್ಷ ರೂ. ಹಾಗೂ 2002-03ನೇ ಸಾಲಿನಲ್ಲಿ 37.87 ಲಕ್ಷ ರೂ. 99.33 ಲಕ್ಷ ರೂ. ಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಇಲ್ಲ.

ಪ್ರಕೃತಿ ವಿಕೋಪದಡಿಯಲ್ಲಿ ಹಣ ಮತ್ತು ಆಹಾರ ಧಾನ್ಯಗಳನ್ನು ಬಿಡುಗಡೆ ಮಾಡಿದ ವಿವರ

76 (119) ಶ್ರೀ ಮಲ್ಲಿಕಾರ್ಜುನ ಕೆ.ಬಿ. (ಬೀರೂರು) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರವು 2002-2003ನೇ ಸಾಲಿನಲ್ಲಿ ಯಾವ ಯಾವ ಜಿಲ್ಲೆಗೆ ಎಷ್ಟು ಹಣ ಪ್ರಕೃತಿ ವಿಕೋಪದಡಿಯಲ್ಲಿ ಬಿಡುಗಡೆ ಮಾಡಲಾಗಿದೆ; (ನಗದು ಮತ್ತು ಆಹಾರಧಾನ್ಯದ ವಿವರ ನೀಡುವುದು) ;

ಆ) ಹಾಗೆ ಬಿಡುಗಡೆ ಮಾಡಿದ ಹಣ ಮತ್ತು ಆಹಾರಧಾನ್ಯ ಉಪಯೋಗಿಸಲಾಗಿದೆಯೇ? (ಜಿಲ್ಲಾವಾರು ಮಾಹಿತಿ ನೀಡುವುದು)

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು) :

ಅ) ಸರ್ಕಾರವು 2002-2003ನೇ ಸಾಲಿನಲ್ಲಿ ಜಿಲ್ಲೆಗಳಿಗೆ ಇದುವರೆಗೆ ರೂ. 79.16 ಕೋಟಿಯನ್ನು ಪ್ರಕೃತಿ ವಿಕೋಪದಡಿಯಲ್ಲಿ ಬಿಡುಗಡೆ ಮಾಡಲಾಗಿದೆ. ವಿವರ ಅನುಬಂಧ -1 ರಲ್ಲಿ ಒದಗಿಸಲಾಗಿದೆ.

ಆ) ಹೌದು. ಜಿಲ್ಲಾವಾರು ಮಾಹಿತಿ ಅನುಬಂಧ -2 ರಲ್ಲಿ ಒದಗಿಸಲಾಗಿದೆ.

ANNEXURE - 1

Details regarding release of funds under CRF & Foodgrains during 2002-2003

Sl. No.	Districts	Funds released under CRF (Rs. in lakhs)	Food grains released in M.Ts.
1	2	3	4
1.	Bangalore (Urban)	120	2100.00
2.	Bangalore (Rural)	320	15750.00
3.	Kolar	460	21700.00
4.	Tumkur	330	23801.00
5.	Chitradurga	260	15500.00
6.	Davanagere	340	23000.00